**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 9, ಪಿ.ಡಬ್ಲ್ಯೂಃ 8**

ಸಾಕ್ಷಿದಾರರ ಹೆಸರು : ಡಾ. ಅರ್ಚನಾ ಶೇಟ್

ತಂದೆಯ ಹೆಸರು : ಶ್ರೀಧರ್

ವಯಸ್ಸು : 29 ವರ್ಷ

ಉದ್ಯೋಗ : ವೈಧ್ಯೆ, ಪಾದರ್ ಮುಲ್ಲಾ ಆಸ್ಪತ್ರೆ, ಮಂಗಳೂರು

ವಾಸ್ತವ್ಯ : ಮಂಗಳೂರು

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 26/09 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಸರಕಾರಿ ಆಸ್ಪತ್ರೆಯಲ್ಲಿ ಸೆಪ್ಟೆಂಬರ್ 2022 ರಿಂದ ಫೆಬ್ರುವರಿ 2023 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಚಾಸಾ 1 ಮತ್ತು 4 ರವರು ಭಟ್ಕಳ ಸರಕಾರಿ ಆಸ್ಪತ್ರೆಗೆ ಹಲ್ಲೆಯ ಹಿನ್ನೆಲೆಯಲ್ಲಿ ಬಂದಿದ್ದು ಇರುತ್ತದೆ.ನಾನು ಅವರನ್ನು ಪರೀಕ್ಷೆ ಮಾಡಿದಾಗ ಅವರಿಗೆ ಮೇಲ್ನೋಟದ ಗಾಯಗಳು ಆಗಿದ್ದು ಇರುವುದಿಲ್ಲ. ಇಬ್ಬರನ್ನು ಪರೀಕ್ಷೆ ಮಾಡಿ ಪ್ರಮಾಣಪತ್ರ ನೀಡಿದ್ದು ಇರುತ್ತದೆ. ಆ ಕುರಿತು ನಾನು ಪ್ರಮಣಪತ್ರ ನೀಡಿದ್ದು ಇರುತ್ತದೆ.

3. ಸಾಕ್ಷಿಯು 2 ಗಾಯದ ಪ್ರಮಾಣಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ- 10 ಮತ್ತು 11 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 10 ಎ ಮತ್ತು 11 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,**

ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳು ನನ್ನ ಹೇಳಿಕೆ ಪಡೆದಿದ್ದು ಇರುವುದಿಲ್ಲ. ಗಾಯಾಳುಗಳಿಗೆ ಎಲ್ಲೆಲ್ಲಿ ಗಾಯವಾಗಿದೆ ಎಂದು ಹೇಳಿಲ್ಲ. ಗಾಯಳುಗಳ ಮೇಲೆ ಹಲ್ಲೆ ಆಗಿದ್ದು ಇರಬಹುದು ಅಥವಾ ಆಗದೇ ಇರಬಹುದು ಎಂದರೆ ಸರಿ. ಒಂದು ವೇಳೆ ಹಲ್ಲೆ ಆಗಿದ್ದೇ ಇದ್ದರೆ ಅವರ ಮೈಮೇಲೆ ಕೆಂಪಾದ ಗಾಯಗಳು ಇರುತ್ತಿದ್ದವು ಎಂದರೆ ಸರಿ. ಸದರಿ ಪ್ರಕರಣದ ತನಿಖಾಧಿಕಾರಿಗಳು

ವೈದ್ಯಕೀಯ ಪ್ರಮಾಣಪತ್ರವನ್ನು ಕೇಳಿದ್ದಕ್ಕೆ ನಾನು ನೀಡಿದ್ದು ಇರುತ್ತದೆ. ತನಿಖಾಧಿಕಾರಿಗಳ ಮುಲಾಜಿಗೆ ಒಳಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**